ನನ್ನ ಮೂವತ್ತನೇ ವಯಸ್ಸಿನಲ್ಲಿ ಆ ಪುಟ್ಟುಟಾಣಿ ಹಲ್ಲುಗಳು ನೋಯಲು ತೊಡಗಿದ್ದು. ಎಕ್ಸ್‌ರೇ ವರದಿ ಹೇಳಿದ್ದು: ಈ ಹಲ್ಲುಗಳಿಗೆ ಬೇರಿಲ್ಲ, ಸುಮ್ಮನೆ ಮೇಲೆ 'ನಾವೂ ಹಲ್ಲು' ಅಂತ ನಿಂತಿವೆ ಅಷ್ಟೆ ಅಂತ! ಈಗೇನು ಮಾಡೋದು? ಅವನ್ನು ಕಿತ್ತು (ಬೇರು ಸಮೇತ ಅಂತ ಹೇಳುವ ಹಾಗಿಲ್ಲವಲ್ಲ) ಆ ಜಾಗಕ್ಕೆ 'ಹಲ್ಲು ಕಟ್ಟೋದು'.

'ಕವಿತೆಯನ್ನು ಚೆನ್ನಾಗಿ ಕಟ್ಟಿ ಕೊಟ್ಟಿದ್ದಾರೆ... ಭಿನ್ನವಾಗಿ ಕಟ್ಟಿದ್ದಾರೆ' ಅಂತ ಯಾರಾದರೂ ಹೇಳುವಾಗ ಅಥವಾ ಬರೆದಾಗ ನನಗೆ 'ಹಲ್ಲು ಕಟ್ಟೋದು' ಅನ್ನುವ ಡಾಕ್ಟರ್ ಮಾತೇ ನೆನಪಾಗುತ್ತದೆ. ಜೊತೆಗೆ, ಒಮ್ಮೆ ಹೀಗೇ ಮಾತನಾಡುವಾಗ ಕವಿ ಕೆ.ವಿ. ತಿರುಮಲೇಶ್ ಅವರು, 'ಕವಿತೆಯನ್ನು ಕಟ್ಟಿಕೊಟ್ಟಿದ್ದಾರೆ ಅಂತಾರಲ್ಲ ತೇಜಶ್ರೀ, ಕವಿತೆಯೇನು ಬೋಂಡವ ಕಟ್ಟಿ ಕೊಡಲಿಕ್ಕೆ? ಹಂಗಂದ್ರೆ ಏನರ್ಥ ಅಂತ ನಿಮಗೆ ಗೊತ್ತಾದ್ರೆ ಹೇಳಿ' ಅಂತ ಜೋರು ನಕ್ಕಿದ್ದೂ ನೆನಪಾಗುತ್ತದೆ.



ಮುಹೂರ್ತ ಗೊತ್ತು ಮಾಡಿದ ದಿನ ಅಕ್ಷರಶಃ ಒಂದೊಂದು ಸೆಕೆಂಡಿಗೆ ಒಂದೊಂದು ಹಲ್ಲಿನಂತೆ ಎರಡು ಸೆಕೆಂಡಲ್ಲಿ ಎರಡು ಹಲ್ಲುಗಳನ್ನು ಮೂಲೋತ್ಪಾಟನೆ ಮಾಡಿದ್ದಾಯಿತು. ಕಸದ ಬುಟ್ಟಿಗೆ ನಿರ್ದಯದಿ ಎಸೆಯಲು ಹೋದ ಡಾಕ್ಟರಿಗೆ 'ಬೇಡ ಬೇಡ ಬೇಡ' ಎಂದು ಕಿರುಚಿ ಗಾಬರಿ ಬೀಳಿಸಿ, ಆ ಹಾಲುಹಲ್ಲುಗಳನ್ನು ಜೋಪಾನವಾಗಿ ಹತ್ತಿಯಲ್ಲಿ 'ಕಟ್ಟಿಕೊಂಡು' ಮನೆಗೆ ತಂದು ಈ ದಿನಮಾನದವರೆಗೆ ಜೋಪಾನವಾಗಿ ಇಟ್ಟಿದ್ದೇನೆ.

ಬೀಳದೆ ಉಳಿದಿದ್ದ ಹುಟ್ಟಲ್ಲುಗಳು ಎರಡು, ಅಲ್ಲಿ ಸಹಜವಾಗಿ ಬೆಳೆಯಬೇಕಾಗಿದ್ದ ಹಲ್ಲುಗಳು ನಾಲ್ಕು! ನಾಲಕ್ಕು ಸೆರಾಮಿಕ್ ಹಲ್ಲುಗಳನ್ನು ಕೂರಿಸಲು ಅಕ್ಕಪಕ್ಕದ ಆರೋಗ್ಯವಂತ ಹಲ್ಲುಗಳನ್ನು ಮಸೆದು, ಉಜ್ಜಿ ಸಿದ್ಧಗೊಳಿಸಿದ್ದಾಯಿತು. ಹಲವು ವರ್ಷಗಳ ಹಿಂದೆ ಒಮ್ಮೆ ಬಸ್‌ಸ್ಟ್ಯಾಂಡಿನಲ್ಲಿ ನನ್ನ ದೊಡ್ಡಪ್ಪನ ಪ್ಯಾಂಟ್ ಜೇಬಿಗೆ ಪರ್ಸ್ ತೆಗೆಯಲು ಕೈಹಾಕಿ ದೊಡ್ಡಪ್ಪನ ಕೈಯಲ್ಲಿ ಸಿಕ್ಕಿಹಾಕಿಕೊಂಡ ಜೇಬುಗಳ್ಳನಿಗೆ ದೊಡ್ಡಪ್ಪ 'ಹೆಗ್ಗಣ! ವಿವೇಕ ಇಲ್ವ?' ಅಂದರಂತೆ. ಕಳ್ಳ ಕೈಬಿಡಿಸಿಕೊಂಡು ಓಡಿ ಹೋಗಿದ್ದು ದೊಡ್ಡಪ್ಪನ ಬೈಗುಳದ ತೀವ್ರತೆಗೋ ಅಥವಾ ನೀರಸತೆಗೋ ಎಂದು ನಮಗೆ ಇಲ್ಲಿತನಕ ಗೊತ್ತಾಗಿಲ್ಲ. ಈಗ, ಕಟ್ಟಬೇಕಾದ ಹಲ್ಲುಗಳಿಗಾಗಿ ಉಳಿದಿದ್ದ ಹಲ್ಲುಗಳಿಗೆ ಹತ್ತರಿ ಹೊಡೆಯೋ ವಿಜ್ಞಾನವಿವೇಕದ ಬಗ್ಗೆ ಏನು ಹೇಳೋದು? ಅಂತೂ ಅಂದಿನಿಂದ ಇಂದುತನಕ 'ಕಟ್ಟಿದ' ಹಲ್ಲುಗಳ ಆಸರೆಯಲ್ಲಿ ಈ ಬಾಯಿಬದುಕು ಸಾಗಿದೆ. ದಾರಿ ಎತ್ತ ಸಾಗುವುದೋ ನೋಡಬೇಕು ಅಂದುಕೊಂಡರೂ ಮನದ ಮೂಲೆಯಲ್ಲಿ ಎ.ಕೆ. ರಾಮಾನುಜನ್ ಅವರ 'ಅಪ್ಪ ಮಗ' ಕವಿತೆಯು 'ಅಮ್ಮ ಮಗ/ಅಮ್ಮ ಮಗಳು' ಅಂತ ಹೆಸರು ಬದಲಿಸಿಕೊಂಡು ಆಗೀಗ ಕೆಣಕುತ್ತಲೇ ಇರುತ್ತದೆ:

ಅಪ್ಪ ಮಗ<br>
ಬಚ್ಚಲು ಮನೆ ಗಂಗಾಳದಲ್ಲಿ<br>
ಅಪ್ಪ ಮರೆತ ಹೊಸ ಹಲ್ಲು<br>
ಸ್ವತಂತ್ರವಾಗಿ<br>
ಹಲ್ಲು ಕಿರಿಯಿತು<br>
ನಾನು ನೋಡಿದೆ.

'ವಿಸ್ಡಮ್' ಅನ್ನು ಕನ್ನಡದಲ್ಲಿ 'ವಿವೇಕ' ಅಂತ ಅನುವಾದಿಸಿ ಕೂರಿಸಿಕೊಂಡಿದ್ದೇವೆ. ಅಗಿಯಲು, ನುರಿಸಲು, ಕಚ್ಚಲು ಸಾಕಷ್ಟು ಹಲ್ಲುಗಳನ್ನು ಕೊಟ್ಟಾದ ಮೇಲೂ ಭಗವಂತ/ತಿ (ಹಾಗೊಂದಿದ್ದರೆ) ಕೆಲಸಕ್ಕೆ ಬಾರದ ಈ 'ವಿವೇಕದ ಹಲ್ಲು'ಗಳನ್ನೇಕೆ ಸೃಷ್ಟಿಸಿದನೋ/ಳೋ? ಡಾಕ್ಟರಲ್ಲಿಗೆ ಹೋಗುವುದಕ್ಕೆ ಇನ್ನೂ ಕೆಲ ದಿನಗಳಿದ್ದದ್ದರಿಂದ ನನ್ನ ಪಾಲಿಗೆ ದಕ್ಕಿದ್ದ ಈ ದಿನಗಳಲ್ಲಿ ಅವರಿವರ ಜೊತೆ ಮಾತಿನ ಮಧ್ಯೆ ಹಲ್ಲಿನ ಪ್ರಸ್ತಾಪ ಬಂದಾಗ ಒಂದಿಬ್ಬರು, 'ನಮ್ಮವೆಲ್ಲ ವಿಸ್ಡಮ್ ಹಲ್ಲುಗಳನ್ನೂ ಆಗಲೇ ಕೀಳಿಸಿದ್ದೀವಿ, ಏನೂ ತೊಂದರೆ ಇಲ್ಲ, ನೀವೂ ಕೀಳಿಸಿ' ಅನ್ನೋ ಸಲಹೆ ಕೊಟ್ಟರು. ನನ್ನೊಳಗೆ ಧೈರ್ಯ ಉಕ್ಕಿ ಬಂತು. ನನ್ನನ್ನು ಒಂದಿಷ್ಟೂ ಹೆದರಿಸದ ಇವರ ಬಿಡುಬೀಸು ಮಾತು ವಿವೇಕದ್ದೇ ಇರಬೇಕು ಅಂತ ನನ್ನ ನಂಬಿಕೆ.

ನಮ್ ಮನ್ಸು ನಮ್ಗೆ ಒಳ್ಳೆದ್ ಮಾಡುದ್ರೆ ದೇವ್ರು ಅಷ್ಟೆ. ಏನಂತೀರಾ?

●